like Sri Ramdev that it should not be there. After all, prohibition is not in force. It has gone and we have seen the evils of prohtbition also. ಏನು ಮಾಡುವುದು? ಎಲ್ಲಿಗೆ ಹೋಗುವುದು? ಆದುದರಿಂದ, ಈ ಮಟ್ಟಿಗೆ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಅನೇಕ ಜನ ಅದು ಅಲ್ಲಿಂದ ತೆಗೆಯಬೇಕೆಂದು ಮನಸ್ಸು ಮಾಡಿರಬಹುದು. ಮಾನ್ಯ ಸದಸ್ಯರಿಗೆ ಅವರ ಕ್ಷೇತ್ರದ ಜನರನ್ನು ಆದರಿಂದ ವಿಮುಕ್ತರನ್ನಾಗಿ ಮಾಡಬೇಕೆಂಬ ಆಸೆ ಇರಬಹುದು. ಆದರೆ, ಅದು ನಡೆಯುವುದಿಲ್ಲ.

ಶ್ರೀ ಐ. ಪಿ. ಡಿ. ಸಾಲಪ್ಪ.—ಮಾನ್ಯ ಹಣಕಾಸಿನ ಮಂತ್ರಿಗಳು ಸರ್ಕಾರದ ನೀತಿಯನ್ನು ಸ್ಪಷ್ಟ ಪಡಿಸಿದ್ದಾರೆ. ಸಂತೋಷ. ಆದರೆ, ಎರಡು ಉದಾಹರಣೆಗಳನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಟ್ಯಾನರಿ ರಸ್ತೆಯಲ್ಲಿ ಹರಿಜನರು ವಾಸ ಮಾಡುವ ಕ್ವಾರ್ಟರ್ಸ್ ಪಕ್ಕದಲ್ಲೇ ಹೆಂಡದಂಗಡಿ ಇದೆ. ಅದನ್ನು ಅಲ್ಲಿಂದ ತೆಗೆಯಬೇಕೆಂದೂ ಜನ ಉಪವಾಸ ಮಾಡಿದ್ದಾರೆ. ಆಗ ಅದನ್ನು ತೆಗೆಯುವುದಾಗಿ ಆಶ್ವಾಸನೆ ಕೊಟ್ಟಿದ್ದರೂ ತೆಗೆದಿಲ್ಲ. ಇನ್ನೊಂದು, ಭಕ್ಷಿ ಗಾರ್ಡನ್‌ನಲ್ಲಿ ಹರಿಜನರು ವಾಸಿಸುವ ಮತ್ತು ದೇವಸ್ಥಾನವಿರುವ ಕಡೆಯೇ ಒಂದು ಹೆಂಡದಂಗಡಿ ಇದೆ. ಹರಿಜನರು, ದೇವಸಾ ನ ಮತ್ತು ವಿದ್ಯಾಶಾಲೆಗಳಿರುವ ಕಡೆಗಳಲ್ಲಿ ಹೆಂಡದಂಗಡಿಗಳನ್ನು ತಪ್ಪಿಸುತ್ತೇವೆಂದು ಮಾನ್ಯ ಸಚಿವರು ಹೇಳಿರುವ ನೀತಿಯನ್ನು ಈ ಎರಡು ಕಡೆಗಳಲ್ಲಿ ಪಾಲಿಸುವರೆ ಎನ್ನುವುದು ನನ್ನ ಮನವಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಎರಡು ಉದಾಹರಣೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಪಿ. ರಾಂದೇವ್,—ಮಂತ್ರಿಗಳ ಉತ್ತರವನ್ನು ಕೇಳಿದ ಮೇಲೆ ಕ್ಷೇತ್ರದ ಶಾಸಕರಿಗೆ ಈ ಅಧಿಕಾರವಿಲ್ಲವೆಂದು ಗೊತ್ತಾಗುತ್ತದೆ. ಇಂದಿನ ಮುಖ್ಯ ಮಂತ್ರಿಗಳು, ಹಿಂದಿನ ಸರ್ಕಾರಗಳು ಸಾರಾಯಿ ಕಂಟ್ರಾಕ್ಟರುದಾರರ ಜೇಬುಗಳಲ್ಲಿದ್ದವು ಎಂದು ಹೇಳಿದ್ದಾರೆ. ಆದರೆ, ಇಂದಿನ ಸರ್ಕಾರ ಸಾರಾಯಿಯೊಳಗೇ ಮುಳುಗಿ ಹೋಗಿದೆ ಎಂದು ನಾನು ಹೇಳಬೇಕಾಗಿದೆ ಸರ್ಕಾರ ಇಂತಹ ಅಸಹಾಯಕ ಪರಿಸ್ಥಿತಿಗೆ ಬಂದಿರುವುದರಿಂದ ಇದಕ್ಕೆ ಚಳವಳಿಯೊಂದು ಮಾರ್ಗವೆಂದು ಕಾಣುತ್ತದೆ, ಚಳವಳಿ ಮಾಡಿದರೆ ಪ್ರೋತ್ಸಾಹ ಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕುಡಿಯುವವರ ವಿರುದ್ಧ ಚಳುವಳಿ ಮಾಡಬಹುದು, ನನ್ನದೇನೂ ಆಕ್ಷೇಪವಿಲ್ಲ. Contractors will come and bid ಇದರಲ್ಲಿ ಯಾರನ್ನಾದರೂ ಎತ್ತಿ ಕಟ್ಟಿ ಬಿಡ್‌ನ್ನು ಏರಿಸಬೇಕೆಂದು ಸರ್ಕಾರ ಪ್ರವೇಶ ಮಾಡಿಲ್ಲ. In fact, it is we, who have kept these excise contractors under check and balance and they are being kept away from any of the administrative set up.

ಶ್ರೀ ಭೀಮಣ್ಣ ಖಂಡ್ರೆ.—ಇವತ್ತು ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ.

ಅಧ್ಯಕ್ಷರು.—ಅದಕ್ಕೆ ನಾವೂ—ನೀವೂ ಜವಾಬ್ದಾರರಲ್ಲ.

Balgeri Project in Haliyal Taluk.

440 SRI V. M. GHADI (Haliyal). Will the Minister of State for Major and Medium Irrigation be pleased to state.—

(a) whether the investigation work of Balgeri (Dusgi) Project in Haliyal Taluk, Karwar Dist was commenced ;

(b) whether it is not a fact that Karnataka Power Corporation has stopped the said investigation work and, if so, when and the reasons for the same,

(c) how much amount was spent on this work so far

(d) whether it is not a fact that the Central and State Governments are giving much importance and top prority for the irrigation work ;

(e) if so, whether the Government allow investigation Dept to continue the investigation of the said project ;

(f) whether it is not a fact that if the height of bund is increased the Railway lines between Alnavar and Dharwer will be submerged ;

(g) whether it is also not a fact the local MLA has represented to the Government about the diversion of the Railway line ;

(h) if so, the action of the Government proposed to take in the matter ?

SRI B. B. CHIMMANAKATTI. (Minister of State for Major and Medium Irrigation).—

(a) Yes.

(b) No. But Karnataka Power Corporation has requsted to defer the investigation.

(c) Rs. 51.887.

(d) Central and State Government are giving much importance and top priority for irrigation works.

(e) The matter is under consideration.

(f) Yes.

(g) No.

(h) Does not arise inview of replies to question (g) above.

ಶ್ರೀ ವಿ. ಎಂ. ಫಾಡಿ.—ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ''ಇಲ್ಲ'' ಎಂದು ಮಾನ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಯೋಜನೆಯ ಪಕ್ಕದಲ್ಲೇ ನನ್ನ ಜಮೀನಿದೆ, ಒಂದು ವರ್ಷ ದಿಂದ ಈ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ನಾನು ಧಾರವಾಡದ ಕಛೇರಿಗೆ ಹೋಗಿದ್ದಾಗ, ಕರ್ನಾಟಕ ವಿದ್ಯುತ್ ಸಂಸ್ಥೆಯವರು ಈ ಕೆಲಸವನ್ನು ಸ್ಥಗಿತೆಗೊಳಿಸಿದ್ದಾರೆಂದು ಹೇಳಿದರು. ಆದರೆ, ನನ್ನ (ಉ) ಪ್ರಶ್ನೆಗೆ ''ಈ ವಿಷಯವು ಪರಿಶೀಲನೆಯಲ್ಲಿದೆ'' ಎಂದು ಹೇಳಿದ್ದಾರೆ. ನನ್ನ (ಅ) ಪ್ರಶ್ನೆಗೆ ''ಇಲ್ಲವೆಂದು'' ಹೇಳಿ (ಉ) ಪ್ರಶ್ನೆಗೆ ''ಪರಿಶೀಲನೆ ಮಾಡುವುದಾಗಿ'' ಹೇಳಿರುವುದರ ಅರ್ಥವೇನು ? ಸ್ಥಗಿತಗೊಳಿಸಿದ ಮೇಲೆ ಪರಿಶೀಲನೆ ಮಾಡುವ ಪ್ರಮೇಯ ಏನು ಬರುತ್ತದೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ —ಈ ಯೋಜನೆಯ ತನಿಖೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ ಎಂದು ಹೇಳಿಲ್ಲ. ತನಿಖಾ ಕಾರ್ಯವನ್ನು ಮುಂದೂಡಬೇಕೆಂದು ಕೋರಲಾಗಿದೆ ಎಂದು ಹೇಳಿದ್ದೇನೆ, ಇದನ್ನು ತನಿಖೆ ಮಾಡತಕ್ಕ ಕಾಲದಲ್ಲಿ ಕರ್ನಾಟಕ ವಿದ್ಯುತ್ ಸಂಸ್ಥೆಯವರು ನೀರಾವರಿ ಇಲಾಖೆಗೆ ಒಂದು ಪತ್ರ ಬರೆದು, ಈ ಯೋಜನೆಯಿಂದ ಕಾಳಿ ವಿದ್ಯುತ್ ಯೋಜನೆಗೆ ಬಹಳ ಧಕ್ಕೆ ಉಂಟಾಗುತ್ತದೆಂದೂ ಈ ಯೋಜನೆಯನ್ನು ಕೈಬಿಡಬೇಕೆಂದೂ ಮತ್ತು ಈ ಯೋಜನೆಯನ್ನು ತೆಗೆದುಕೊಂಡದ್ದೇ ಆದರೆ ಸುಮಾರು ೪೬ ಲಕ್ಷ ರೂಪಾಯಿಗಳಷ್ಟು ಪ್ರತಿ ವರ್ಷ ಹಾನಿಯಾಗುವುದರ ಜೊತೆಗೆ ೨೦ ಮೆಗಾ ಯೂನಿಟ್ ವಿದ್ಯುತ್

ನಷ್ಟವಾಗಂತ್ತದೆಂದು ಹೇಳಿದ್ದಾರೆ. ಅಲ್ಲದೆ ಈ ಬಗ್ಗೆ ನೀರಾವರಿ ಇಲಾಖೆಯ ಕಾರ್ಯದರ್ಶಿಯವರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಕಾರ್ಯದರ್ಶಿಯವರೊಡನೆ ಚರ್ಚೆ ಮಾಡಿದ್ದಾರೆ. ಒಟ್ಟಿನಲ್ಲಿ ಈ ಯೋಜನೆಯನ್ನು ಕೈಬಿಟ್ಟರೆ ಬಹಳ ಒಳ್ಳೆಯದೆಂದು ವಿದ್ಯುತ್ ಸಂಸ್ಥೆಯವರು ಹೇಳಿದ್ದಾರೆ. ಇನ್ನೂ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ವಿ. ಎಂ. ಘಾಡಿ.—ನನ್ನ (ಖ) ಪ್ರಶ್ನೆಗೆ ''ಇಲ್ಲವೆಂದು'' ಉತ್ತರ ನೀಡಿದ್ದೀರಿ. ನಾನೇ ತಮಗೆ ಪತ್ರ ಬರೆದಿದ್ದೇನೆ. ಆ ಪತ್ರಕ್ಕೆ ಉತ್ತರವಾಗಿ.—

> ''I am in receipt of your letter dated 6-2-1981 regarding the investigation work of Balegeri (Dusgi) Project. I have forwaraded the letter to the Special Secretary to the Government P. W. D. (E) with instruction to take suitable steps''.

ಎಂದು ತಾವು ತಿಳಿಸಿದ್ದೀರಿ. ಆ ಅಕನಾಲೆಡ್ಜಮೆಂಟ್ ನನ್ನ ಬಳಿ ಇದೆ. ಹೀಗಿದ್ದರೂ ಮನವಿ ಸಲ್ಲಿಸಿಲ್ಲವೆಂದು ತಾವು ಹೇಗೆ ಹೇಳುತ್ತೀರಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಪ್ರಶ್ನೆ ಕೇಳಿದಾಗ ಇರಲಿಲ್ಲ, ನಂತರ ತಾವು ಪತ್ರ ಬರೆದಿರ ಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ತರ ಇವತ್ತು ಕೊಡುತ್ತಿದ್ದೀರಲ್ಲವೆ ?

ಶ್ರೀ ವಿ. ಎಂ. ಘಾಡಿ.—೧೧-೨-೧೯೮೧ ರಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ. ಆದಾದನಂತರ ನಾನು ಪ್ರಶ್ನೆ ಕೇಳಿದ್ದೇನೆ.

MR. SPEAKER.—Answers will have to be up-to-date.

ಪ್ರಶ್ನೋತ್ತರ.—೨೬೭ (೫೯೮) ತಡೆಹಿಡಿಯಲಾಗಿದೆ.

Honorarium to T. D. B. Members in the State.

599. SRI S. M. CHANDRASHEKHARA (Hosanagar). Will the Minister for Rural Development and Panchayath Raj be pleased to state.—

(a) whether there is any proposal before the Government to give monthly honorarium to T. D. B. members in the state ;

(b) whether the Government is aware that the members of the municipality are getting monthly honorarium ;

(c) if so, the reason for discrimination ;

(d) whether the Government is aware that the T.D.B. president and members are getting the T. A, and D. A. at the old rates ;

(e) whether there is any proposal to enchance the T. A. and D. A. ?

SRI B. RAMAIAH. (Minister for Rural Development and Panchayat Raj).—

(a) No.